ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.
ಸಿಸಿ **352 /2024**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಡಿ ಕೃಷ್ಣ | ಚಾ.ಸಾ.-**3** |
| ತಂದೆಯ/ಗಂಡನ ಹೆಸರು | - | ಕೆ ದೊಡ್ಡಸಿದ್ಧಪ್ಪ | ಫ್ರಾ.ಸಾ.-**2** |
| ವಯಸ್ಸು | - | 59 ವರ್ಷ | |
| ಉದ್ಯೋಗ | - | ಶಿಕ್ಷಕ | |
| ವಾಸಸ್ಥಳಃ | - | ಅರುವನಹಳ್ಳಿ | |

ದಿನಾಂಕಃ 15-07-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಮಾನ್ಯ ವಿಶೇಷ ಎ ಪಿ ಪಿ ರವರಿಂದಃ

ಚಾ.ಸಾ.1 ನನ್ನ ಹೆಂಡತಿ , ಚಾ.ಸಾ. 2 ನನ್ನ ಮಗ,. ಚಾ.ಸಾ. 4 ರಿಂದ 8 ರವರ ಪರಿಚಯವಿರುತ್ತದೆ. ಅವರು ನಮ್ಮ ಗ್ರಾಮಸ್ಥರು, ಆರೋಪಿತರ ಪರಿಚಯ ಇದೆ. ಅವರು ನಮ್ಮ ಪಕ್ಕದ ಜಮೀನವರು.

ನಾವು ಸರ್ವೆಗೆ ಅರ್ಜಿಯನ್ನು ಸಲ್ಲಿಸಿದ್ದು ಆದರೆಆರೋಪಿತರು ಸರ್ವೆ ಮಾಡಲು ಬಿಟ್ಟಿರುವುದಿಲ್ಲ, 4 ನೇ ಭಾರಿಗೆ ಅರ್ಜಿಗೆ ಸಲ್ಲಿಸಿದ್ದು, ದಿಃ 21-01-2024 ರಂದು ಸರ್ವೆಯರ್ ಬಂದಿದ್ದು ಆ ದಿನ ನನ್ನ ಹೆಂಡತಿ ಚಾಸಾ-1 ನನ್ನ ಮಗ ಚಾಸಾ-2 ಇದ್ದು ಆ ದಿನ ನಾನು ಶಾಲೆಗೆ ಹೋಗಿದ್ದು ಆ ಸಮಯದಲ್ಲಿ ಆರೋಪಿತರು ಸರ್ವೆ ಮಾಡಲು ಬಿಟ್ಟಿರುವುದಿಲ್ಲ. ನಂತರ ನಾನು ದಿಃ 24-01-2024 ರಂದು ಸಂಜೆ ಸುಮಾರು 05-00 ಗಂಟೆ ಸಮಯದಲ್ಲಿ ನಾನು ಜಮೀನಿಂದ ಮನೆಗೆ ಹೋಗುವಂತಹ ಸಮಯದಲ್ಲಿ ಆರೋಪಿತರು ನನ್ನನ್ನು ಅಡ್ಡಗಟ್ಟಿ ಆರೋಪಿ-1 ರಿಂದ 3 ರವರು ಅಡ್ಡಗಟ್ಟಿ ನನ್ನನ್ನು ಗಾಡಿಯಿಂದ ಎಳೆದು ಬೀಳಿಸಿ, ಅವಾಚ್ಯ ಶಬ್ದಗಳಿಂದ ನನನು ಉದ್ದೇಶಿಸಿ ಬೈದಿರುತ್ತಾರೆ ಹಾಗೂ ಕೆಲಸದಿಂದ ನಿನ್ನನ್ನು ತೆಗೆಸಿ ಹಾಕುತ್ತೇನೆಂದು ನನಗೆ ಬೈದಿರುತ್ತಾರೆ. ನಂತರ ಗ್ರಾಮಸ್ಥರು ಗಲಾಟೆ ಬಿಡಿಸಿ ಸಮಾಧಾನಪಡಿಸಿರುತ್ತಾರೆ. ಈ ಸಂಬಂಧವಾಗಿ ಪೊಲೀಸರ ಮುಂದೆ ಹೇಳಿಕೆಯನು ನೀಡಿರುತ್ತೇನೆ. ಗಲಾಟೆಯಾದ ನಂತರ ಪೊಲೀಸರು ಸ್ಥಳಕ್ಕೆ ಬಂದು ನಾನು ತೋರಿಸಿದ ಸ್ಥಳದಲ್ಲಿ ಚಾಸಾ-7 ಮತ್ತು 8 ರವರ ಸಮಕ್ಷಮ ಸಂಜೆ 04-30 ರಿಂದ 05-00 ಗಂಟೆವರೆಗೆ ಮಹಜರ್ ಕ್ರಮ ಜರುಗಿಸಿರುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ, ಸದರೀ ದಾಖಲೆ ಮಹಜರ್ ಆಗಿದ್ದು, ಅದನ್ನು ನಿ.ಪಿ. 3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.3 ಎ ಎಂದು ಗುರುತಿಸಲಾಯಿತು.

ಈ ದಿನ ನ್ಯಾಯಾಲಯದ ಮುಂದೆಯಿರುವ 1 ಮತ್ತು 2 ನೇ ಆರೋಪಿತರು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಉಳಿದ ಆರೋಪಿತರು ಗೈರುಹಾಜರಾಗಿದ್ದು ಆರೋಪಿತರ ಪರ ವಕೀಲರು ಆರೋಪಿತರ ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ಪಾಟೀ ಸವಾಲು ಆರೋಪಿತರ ಪರ ಶ್ರೀ ಎಂ ಸಿ ಎ ವಕೀಲರಿಂದ

ನಾನು ಬನ್ನಹಳ್ಳಿಯಲ್ಲಿ ಶಿಕ್ಷಕನಾಗಿ ಕೆಲಸ ನಿರ್ವಹಿಸುತ್ತಿದ್ದೇನೆ. ಬನ್ನಹಳ್ಳಿಯಿಂದ ನಮ್ಮ ಜಮೀನು ಸುಮಾರು 1-2 ಕಿ ಮೀ ದೂರ ಇರುತ್ತದೆ. ಪೊಲೀಸರು ನನ್ನ ಹೇಳಿಕೆಯನ್ನು ಗಲಾಟೆಯಾದ ಎರಡು ದಿನದ ನಂತರ ತೆಗೆದುಕೊಂಡಿರುತ್ತಾರೆ. ಸರ್ವೆ ನೋಟಿಸ್ ನ್ನು ನಾನು ಪೊಲೀಸರಿಗೆ ನೀಡಿರುವುದಿಲ್ಲ. ನನ್ನ ಮತ್ತು ನನ್ನ ಹೆಂಡತಿ ಹಾಗೂ ಮಗನ ವಿರುದ್ಧ ಇದೇ ನ್ಯಾಯಾಲಯದಲ್ಲಿ ಕ್ರಿಮಿನಲ್ ಪ್ರಕರಣ ಬಾಕಿ ಇದೆ ಎಂದರೆ ಸರಿ. ನಾನು

ಹಾಗೂ ನನ್ನ ಹೆಂಡತಿ ಚಾಸಾ-1 ಮತ್ತು 2 ರವರೇ ಆರೋಪಿತರ ವಿರುದ್ಧ ಹಲ್ಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಮಹಜರ್ ಗಳನ್ನು 2 ಜಾಗದಲ್ಲಿ ಮಾಡಿರುತ್ತಾರೆ ನಮ್ಮ ಜಮೀನಿನಲ್ಲಿ ಹಾಗೂ ನನಗೆ ಹಲ್ಲೆ ಮಾಡಿದ ಜಾಗದಲ್ಲಿ ಮಾಡಿರುತ್ತಾರೆ. ನಾನು ಹಲ್ಲೆ ಸಂಬಂಧವಾಗಿ ಆಸ್ಪತ್ರೆಗೆ ಹೋಗಿರುವುದಿಲ್ಲ. ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಮತ್ತು ಯಾವುದೇ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-4 ರಿಂದ 8 ರವರು ಘಟನಾ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಎಂದರೆ ಸರಿಯಲ್ಲ ಮತ್ತು ಅಡ್ಡಗಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 22-01-2024 ರಂದು ಯಾವುದೇ ಗಲಾಟೆ ಆಗಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ದಿಃ21-01-2024 ರಂದು ಗಲಾಟೆ ಆಗಿರುತ್ತದೆ. ಆರೋಪಿತರಿಗೂ, ನಮಗೂ ಜಮೀನಿನ ವಿಷಯವಾಗಿ ವೈಷಮ್ಯ ಇರುವುದರಿಂದ ಈ ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ , ಮದ್ದೂರು.